ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 16-12-2000.

# *ಸಾಕ್ಷಾತ್ ಬ್ರಹ್ಮಾ ತಂದೆಯ ಸಮಾನ ಕರ್ಮಯೋಗಿ ಫರಿಶ್ತೆಗಳಾಗಿ ಆಗ ಸಾಕ್ಷಾತ್ಕಾರ ಪ್ರಾರಂಭವಾಗುವುದು*

(साक्षात् ब्रहमा बाप समान कर्मयोगी फरिश्ता बनो तब साक्षात्कार शुरू हो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬ್ರಾಹ್ಮಣ ಸಂಸಾರದ ರಚಯಿತರಾದ ಬಾಪ್‌ದಾದಾರವರು ತಮ್ಮ ಬ್ರಾಹ್ಮಣ ಸಂಸಾರವನ್ನು ನೋಡಿ-ನೋಡಿ ಹರ್ಷಿತರಾಗುತ್ತಿದ್ದಾರೆ. ಎಷ್ಟು ಚಿಕ್ಕ ಪ್ರಿಯವಾದ ಸಂಸಾರವಾಗಿದೆ. ಪ್ರತಿಯೊಬ್ಬ ಬ್ರಾಹ್ಮಣರ ಮಸ್ತಕದಲ್ಲಿ ಭಾಗ್ಯದ ನಕ್ಷತ್ರ ಹೊಳೆಯುತ್ತಿದೆ. ನಂಬರ್ವಾರ್ ಆಗಿದ್ದರೂ ಪ್ರತಿಯೊಬ್ಬರ ನಕ್ಷತ್ರಗಳಲ್ಲಿ ಭಗವಂತನನ್ನು ತಿಳಿದುಕೊಂಡಿರುವುದು ಮತ್ತು ಭಗವಂತರವರಾಗುವ ಶ್ರೇಷ್ಠ ಭಾಗ್ಯದ ಹೊಳಪಿದೆ. ಯಾವ ತಂದೆಯನ್ನು ಋಷಿ, ಮುನಿಗಳು, ತಪಸ್ವಿಗಳು ಗೊತ್ತಿಲ್ಲ-ಗೊತ್ತಿಲ್ಲ ಎಂದು ಹೇಳಿ ಹೋದರೋ ಆ ತಂದೆಯನ್ನು ಬ್ರಾಹ್ಮಣ ಸಂಸಾರದ ಮುಗ್ಧ-ಮುಗ್ಧ ಆತ್ಮರು ತಿಳಿದುಕೊಂಡಿದ್ದಾರೆ, ಪಡೆದುಕೊಂಡಿದ್ದಾರೆ. ಈ ಭಾಗ್ಯ ಯಾವ ಆತ್ಮರಿಗೆ ಪ್ರಾಪ್ತಿಯಾಗುತ್ತದೆ? ಸಾಧಾರಣ ಆತ್ಮರಿಗೆ ಪ್ರಾಪ್ತಿಯಾಗುತ್ತದೆ. ತಂದೆಯು ಸಹ ಸಾಧರಣ ತನುವಿನಲ್ಲಿಯೇ ಬರುತ್ತಾರೆ, ಸಾಧರಣ ಆತ್ಮರೇ ತಂದೆಯನ್ನು ತಿಳಿಯುವರು. ಇಂದಿನ ಈ ಸಭೆಯಲ್ಲಿ ನೋಡಿ, ಯಾರು ಕುಳಿತ್ತಿದ್ದಾರೆ? ಕೋಟ್ಯಾಧಿಪತಿ-ಲಕ್ಷಾಧಿಪತಿ ಆತ್ಮರೆನಾದರೂ ಕುಳಿತಿದ್ದಾರೆಯೇ? ಸಾಧರಣ ಆತ್ಮರದ್ದೇ ಗಾಯನವಿದೆ. ತಂದೆ ಬಡವರ-ಬಂಧು ಎಂದು ಗಾಯನವಿದೆ.

ಕೋಟ್ಯಾಧಿಪತಿ-ಲಕ್ಷಾಧಿಪತಿಯ ಬಂಧು ಎಂದು ಗಾಯನವಿಲ್ಲ. ಬುದ್ಧಿವಂತರ ಬುದ್ಧಿಯು ಯಾವುದೇ ಕೋಟ್ಯಾಧಿಪತಿ-ಲಕ್ಷಾಧಿಪತಿಯ ಬುದ್ಧಿಯನ್ನು ಬದಲಾಯಿಸುವುದಕ್ಕೆ ಸಾಧ್ಯವೇ? ಏನು ದೊಡ್ಡ ಮಾತಿದೆ! ಆದರೆ ಡ್ರಾಮದ ಬಹಳ ಒಳ್ಳೆಯ ಕಲ್ಯಾಣಕಾರಿ ನಿಯಮ ಮಾಡಲ್ಪಟಿದೆ, ಪರಮಾತ್ಮನ ಕಾರ್ಯದಲ್ಲಿ ಹನಿ-ಹನಿ ಕೆರೆಯಾಗುತ್ತದೆ. ಅನೇಕ ಆತ್ಮರ ಭವಿಷ್ಯವನ್ನು ಮಾಡಬೇಕಾಗಿದೆ. 10-20 ಜನರದಲ್ಲ, ಅನೇಕ ಆತ್ಮರದು  ಸಫಲವಾಗಬೇಕಾಗಿದೆ ಸಫಲತೆಯ ನಕ್ಷತ್ರಗಳಾಗಿದ್ದೀರಿ. ಎಲ್ಲರೂ ಸಫಲತೆಯ ನಕ್ಷತ್ರಗಳಾಗಿದ್ದೀರಾ? ಆಗಿದ್ದೀರಾ ಅಥವಾ ಆಗಬೇಕು, ಎಂದು ಯೋಚಿಸುತ್ತಿದ್ದೀರಾ? ಯೋಚಿಸಬೇಡಿ. ಮಾಡುವೆವು, ನೋಡುವೆವು, ಮಾಡುವುದಂತು ಇದ್ದೇ ಇದೆ.. ಹೀಗೆ ಯೋಚಿಸುವುದು ಸಹ ಸಮಯ ಕಳೆಯುವುದಾಗಿದೆ. ಭವಿಷ್ಯ ಮತ್ತು ವರ್ತಮಾನದ ಪ್ರಾಪ್ತಿಯನ್ನು ಕಳೆದುಕೊಳ್ಳುವುದಾಗಿದೆ.

ಬಾಪ್‍ದಾದಾರವರ ಹತ್ತಿರ ಕೆಲ-ಕೆಲ ಮಕ್ಕಳ ಒಂದು ಸಂಕಲ್ಪವು ತಲುಪುತ್ತದೆ. ಹೊರಗಡೆಯವರು ಬಡಪಾಯಿ ಆಗಿದ್ದಾರೆ ಆದರೆ ಬ್ರಾಹ್ಮಣ ಆತ್ಮರು ಬಡಪಾಯಿಯಲ್ಲ, ತಿಳಿವಳಿಕೆಯಿರುವವರಾಗಿದ್ದಾರೆ. ಆದರೆ ಕೆಲ-ಕೆಲವೊಮ್ಮೆ ಕೆಲ-ಕೆಲ ಮಕ್ಕಳಲ್ಲಿ ಒಂದು ಬಲಹೀನ ಸಂಕಲ್ಪ ಹುಟ್ಟುತ್ತದೆ, ತಿಳಿಸುವುದೇ. ತಿಳಿಸುವುದೇ? ಎಲ್ಲರೂ ಕೈ ಎತ್ತುತ್ತಿದ್ದಾರೆ, ಬಹಳ ಒಳ್ಳೆಯದು. ಕೆಲ-ಕೆಲವೊಮ್ಮೆ ಯೋಚಿಸುತ್ತಾರೆ ವಿನಾಶವಾಗುವುದಿದೆಯೇ ಅಥವಾ ಆಗುವುದಿಲ್ಲವೇ! 99ರ ಚಕ್ರವು ಪೂರ್ಣವಾಯಿತು, 2000ವೂ ಪೂರ್ಣವಾಗುತ್ತದೆ. ಈಗ ಎಲ್ಲಿಯವರೆಗೆ? ಬಾಪ್‍ದಾದಾರವರು ಯೋಚಿಸುತ್ತಾರೆ – ನಗು ಬರುವ  ಮಾತೇನೆಂದರೆ ವಿನಾಶದ ಬಗ್ಗೆ ಯೋಚಿಸುವುದು ಅರ್ಥಾತ್ ತಂದೆಗೆ ಬಿಳ್ಕೊಡುಗೆಯನ್ನು ಕೊಡುವುದು. ಏಕೆಂದರೆ ವಿನಾಶವಾದರೆ ತಂದೆಯಂತು ಪರಮಧಾಮದಲ್ಲಿ ಹೋಗಿಬಿಡುವರಲ್ಲವೇ! ಸಂಗಮದಿಂದ ಸುಸ್ತಾಗಿಬಿಟ್ಟಿದ್ದೀರಾ? ವಜ್ರ ಸಮಾನವೆಂದು ಹೇಳುತ್ತೀರಿ ಮತ್ತು ಸ್ವರ್ಣಿಮವನ್ನು ಹೆಚ್ಚು ನೆನಪು ಮಾಡುತ್ತೀರಿ, ಆಗುವುದಿದೆ ಆದರೆ ಏಕೆ ಕಾಯಬೇಕು? ಕೆಲವು ಮಕ್ಕಳು ಸಫಲ ಮಾಡಬೇಕು ಎಂದು ಯೋಚಿಸುತ್ತಾರೆ ಆದರೆ ನಾಳೆ - ನಾಡಿದ್ದು ವಿನಾಶವಾದರೆ, ನಮ್ಮದಂತು ಕೆಲಸಕ್ಕೆ ಬರಲೇ ಇಲ್ಲ. ನಮ್ಮದಂತು ಸೇವೆಯಲ್ಲಿ ತೊಡಗಲೇ ಇಲ್ಲ. ಹಾಗಾದರೆ ಮಾಡಿ, ಯೋಚಿಸಿ ಮಾಡಿ. ಲೆಕ್ಕದಿಂದ ಮಾಡಿ, ಸ್ವಲ್ಪ-ಸ್ವಲ್ಪ ಮಾಡಿ. ಈ ಸಂಕಲ್ಪ ತಂದೆಯ ಹತ್ತಿರವೂ ತಲುಪುತ್ತದೆ. ಆದರೆ ತಿಳಿದುಕೊಳ್ಳಿ ಇಂದು ನೀವು ಮಕ್ಕಳು ತಮ್ಮ ತನುವನ್ನು ಸೇವೆಯಲ್ಲಿ ಸಮರ್ಪಣೆ ಮಾಡಿದಿರಿ, ಮನಸ್ಸನ್ನು ವಿಶ್ವ ಪರಿವರ್ತನೆಯ ವೈಬ್ರೆಷನ್ನಲ್ಲಿ ನಿರಂತರ ತೊಡಗಿಸಿದ್ದೀರಿ, ಧನವೇನಿದೆ, ಪ್ರಾಪ್ತಿಯ ಮುಂದೆ ಏನಿಲ್ಲ ಆದರೆ ಏನಿದೆ, ಇಂದು ನೀವು ಜಮಾ ಮಾಡಿದಿರಿ ಮತ್ತು ನಾಳೆ ವಿನಾಶವಾಗಿಬಿಡುತ್ತದೆ ಅಂದಾಗ ನಿಮ್ಮದು ಸಫಲವಾಯಿತೇ ಅಥವಾ ವ್ಯರ್ಥವಾಯಿತೇ? ಯೋಚಿಸಿ, ಸೇವೆಯಲ್ಲಿ ತೊಡಗಲಿಲ್ಲ, ಅಂದಾಗ ಸಫಲವಾಯಿತೇ? ನೀವು ಯಾರ ಪ್ರತಿ ಸಫಲ ಮಾಡಿದ್ದೀರಿ? ಬಾಪ್‍ದಾದಾರವರ ಪ್ರತಿ ಸಫಲ ಮಾಡಿದ್ದೀರಲ್ಲವೇ? ಬಾಪ್‍ದಾದಾರವರಂತು ಅವಿನಾಶಿಯಾಗಿದ್ದಾರೆ, ಅವರು ವಿನಾಶವಾಗುವುದಿಲ್ಲ. ಅವಿನಾಶಿ ಖಾತೆಯಲ್ಲಿ, ಅವಿನಾಶಿ ಬಾಪ್‍ದಾದಾರವರ ಹತ್ತಿರ ತಮ್ಮದು ಇಂದು ಜಮಾ ಮಾಡಿದ್ದೀರಿ, ಒಂದು ಗಂಟೆ ಮೊದಲು ಜಮಾ ಮಾಡಿದರೂ ಅವಿನಾಶಿ ತಂದೆಯ ಹತ್ತಿರ ನಿಮ್ಮ ಖಾತೆ ಒಂದಕ್ಕೆ ಪದಮಗುಣ ಜಮಾವಾಗಿ ಬಿಟ್ಟಿತು. ಒಂದಕ್ಕೆ ಪದಮ ಕೊಡಲು ತಂದೆಯು ಬಂಧಿತರಾಗಿದಾರೆ. ಅಂದಾಗ ತಂದೆಯು ಹೋಗಿ ಬಿಡುವುದಿಲ್ಲ ತಾನೇ! ಹಳೆಯ ಸೃಷ್ಟಿ ಮಾತ್ರ ವಿನಾಶವಾಗುತ್ತದೆಯಲ್ಲವೇ! ಅದಕ್ಕಾಗಿ ನಿಮ್ಮ ಹೃದಯದಿಂದ ಮಾಡಬೇಕು. ಅನಿವಾರ್ಯತೆಯಿಂದ ಮಾಡಿರುವುದು,

ನೋಡಿ-ನೋಡಿ ಮಾಡುವುದಕ್ಕೆ ಸಂಪೂರ್ಣವಾಗಿ ಸಿಗುವುದಿಲ್ಲ. ಲಭಿಸುವುದಂತೂ ಅವಶ್ಯವಾಗಿ ಲಭಿಸುತ್ತದೆ ಏಕೆಂದರೆ ಕೊಟ್ಟಿರುವುದು ದಾತನಿಗೆ ಆದರೆ ಪೂರ್ಣ ಸಿಗುವುದಿಲ್ಲ ಅದಕ್ಕೆ ಈ ರೀತಿ ಯೋಚಿಸಬೇಡಿ ಈಗಂತು ವಿನಾಶವಂತು 2001ರವರೆಗೂ ಕಾಣಿಸುತ್ತಿಲ್ಲ, ಈಗಂತು ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ, ಮನೆಗಳನ್ನು ಕಟ್ಟಿಸಲಾಗುತ್ತಿದೆ. ದೊಡ್ಡ-ದೊಡ್ಡ ಯೋಜನೆಗಳನ್ನು ಮಾಡಲಾಗುತ್ತಿದೆ, ಅಂದಾಗ 2001ರವರೆಗೆ ಕಾಣಿಸುತ್ತಿಲ್ಲ, ಕಾಣಿಸುವುದಿಲ್ಲ. ಎಂದೂ ಈ ಮಾತುಗಳನ್ನು ತಮ್ಮ ಆಧಾರವನ್ನಾಗಿ ಮಾಡಿಕೊಂಡು ಹುಡುಗಾಟಿಕೆಯಲ್ಲಿ(ಸೋಮಾರಿತನದಲ್ಲಿ) ಬರಬೇಡಿ. ಇದ್ದಕ್ಕಿದ್ದಂತೆ ಆಗುವುದಿದೆ. ಇಂದು ಇಲ್ಲಿ ಕುಳಿತಿದ್ದೀರಿ, ಗಂಟೆಯ ನಂತರವೂ ಸಹ ಆಗಬಹುದು. ಆಗುವುದಿಲ್ಲ, ಒಂದು ಗಂಟೆಯ ನಂತರ ಏನಾಗುತ್ತದೆಯೋ ಏನೋ ಎಂದು ಭಯ ಪಡಬೇಡಿ. ಸಂಭವವಿದೆ. ಇಷ್ಟು ಸದಾ ತಯಾರಾಗಿರಬೇಕಾಗಿದೆ. ಶಿವರಾತ್ರಿಯವರೆಗೂ ಮಾಡಬೇಕು ಎಂದು ಯೋಚಿಸಬೇಡಿರಿ. ಸಮಯಕ್ಕಾಗಿ ಕಾಯಬೇಡಿ. ಸಮಯವೂ ನಿಮ್ಮ ರಚನೆಯಾಗಿದೆ, ನೀವು ಮಾಸ್ಟರ್ ರಚಯಿತರಾಗಿದ್ದೀರಿ. ರಚಯಿತ ರಚನೆಗೆ ಅಧೀನರಾಗುವುದಿಲ್ಲ. ಸಮಯವು ನಿಮ್ಮ ರಚನೆ ಆದ್ದರಿಂದ ಸಮಯವು ನಿಮ್ಮ ಆದೇಶದಂತೆ ನಡೆಯುವಂತಹದಾಗಿದೆ. ನೀವು ಸಮಯಕ್ಕಾಗಿ ಕಾಯಬೇಡಿ, ಆದರೆ ಈಗ ಸಮಯವು ನಿಮಗಾಗಿ ಕಾಯುತ್ತಿದೆ. ಕೆಲವು ಮಕ್ಕಳು ಯೋಚಿಸುತ್ತಾರೆ, 6 ತಿಂಗಳಿಗಾಗಿ ಬಾಪ್‌ದಾದಾರವರು ಹೇಳಿದ್ದಾರೆ ಅಂದಾಗ 6 ತಿಂಗಳು ಆಗುತ್ತದೆ. ಆಗುತ್ತದೆಯಲ್ಲವೇ. ಆದರೆ ಬಾಪ್‌ದಾದಾರವರು ಹೇಳುತ್ತಾರೆ – ಈ ಹದ್ದಿನ ಮಾತುಗಳ ಆಧಾರವನ್ನು ತೆಗೆದುಕೊಳ್ಳಬೇಡಿ, ಸದಾ ತಯಾರಾಗಿರಿ. ನಿರಾಧಾರ, ಒಂದು ಸೆಕೆಂಡಿನಲ್ಲಿ ಜೀವನಮುಕ್ತಿಯ ಚಾಲೇಂಜ್ ಮಾಡುತ್ತೀರಿ – ಒಂದು ಸೆಕೆಂಡಿನಲ್ಲಿ ಜೀವನಮುಕ್ತಿಯ ವಾರಸತ್ವವನ್ನು ತೆಗೆದುಕೊಳ್ಳಿ. ನೀವು ಒಂದು ಸೆಕೆಂಡಿನಲ್ಲಿ ಸ್ವಯಂನ್ನು ಜೀವನಮುಕ್ತರನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲವೇ? ಅದಕ್ಕಾಗಿ ಕಾಯಬೇಡಿ, ಸಂಪನ್ನರಾಗುವ ತಯಾರಿ ಮಾಡಿಕೊಳ್ಳಿ.

ಬಾಪ್‌ದಾದಾರವರಿಗೆ ಮಕ್ಕಳ ಆಟವನ್ನು ನೋಡಿ ನಗು ಸಹ ಬರುತ್ತದೆ. ಯಾವ ಆಟದ ಮೇಲೆ ನಗು ಬರುತ್ತದೆ? ಹೇಳುವುದೇ? ಇಂದು ಮುರುಳಿ ನಡೆಸುತ್ತಿಲ್ಲ, ಸಮಾಚಾರವನ್ನು ತಿಳಿಸುತ್ತಿದ್ದಾರೆ. ಇಲ್ಲಿಯವರೆಗೆ ಕೆಲ ಮಕ್ಕಳಿಗೆ ಆಟಿಕೆ ಸಾಮಾನುಗಳಿಂದ ಆಟವಾಡುವುದು ಬಹಳ ಇಷ್ಟವಾಗುತ್ತದೆ. ಚಿಕ್ಕ-ಚಿಕ್ಕ ಮಾತುಗಳ ಆಟಿಕೆಗಳೊಂದಿಗೆ ಆಟವಾಡುವುದು, ಚಿಕ್ಕ ಮಾತುಗಳನ್ನು ತಮ್ಮದಾಗಿಸಿಕೊಳ್ಳುವುದು, ಈ ರೀತಿ ಸಮಯವನ್ನು ಕಳೆಯುತ್ತಾರೆ. ಇವು ಸೈಡ್ಸೀನ್ಗಳಾಗಿವೆ (ದಾರಿಯ ಪಕ್ಕದಲ್ಲಿರುವ ದೃಶ್ಯಗಳು). ಭಿನ್ನ ಭಿನ್ನ ಸಂಸ್ಕಾರಗಳ ಮಾತುಗಳು ಅಥವಾ ನಡತೆ – ಇವು ಸಂಪೂರ್ಣ ಗುರಿಯ ಮಧ್ಯದಲ್ಲಿ ಸೈಡ್ಸೀನ್ಗಳಾಗಿವೆ. ಇದರಲ್ಲಿ ನಿಲ್ಲುವುದು ಅರ್ಥಾತ್ ಯೋಚಿಸುವುದು, ಪ್ರಭಾವದಲ್ಲಿ ಬರುವುದು, ಸಮಯವನ್ನು ಕಳೆಯುವುದು, ರುಚಿಯಿಂದ ಕೇಳುವುದು, ತಿಳಿಸುವುದು, ವಾಯುಮಂಡಲವನ್ನು ಮಾಡುವುದು. ಇವು ನಿಲ್ಲುವುದಾಗಿದೆ. ಇದರಿಂದ ಸಂಪೂರ್ಣತೆಯ ಗುರಿಯಿಂದ ದೂರವಾಗಿಬಿಡುತ್ತೀರಿ. ಪರಿಶ್ರಮ ಬಹಳ, ಇಚ್ಛೆಗಳು ಬಹಳ "ತಂದೆಯ ಸಮಾನರಾಗಲೇಬೇಕು", ಎಂಬ ಶುಭ ಸಂಕಲ್ಪ, ಶುಭ ಇಚ್ಛೆಗಳಿವೆ ಆದರೆ ಪರಿಶ್ರಮ ಪಡುತ್ತಲೂ ಅಡೆತಡೆಗಳು ಬರುತ್ತವೆ. ಎರಡು ಕಿವಿಗಳಿವೆ, ಎರಡು ಕಣ್ಣುಗಳಿವೆ, ಮುಖವಿದೆ(ಬಾಯಿಯಿದೆ) ಅಂದಾಗ ನೋಡಲು ಬರುತ್ತದೆ, ಕೇಳಲು ಬರುತ್ತದೆ, ಮಾತನಾಡಲು ಬರುತ್ತದೆ, ಆದರೆ ತಂದೆಯ ಬಹಳ ಹಳೆಯ ಸ್ಲೋಗನ್ ಸದಾ ನೆನಪಿಡಿ - ನೋಡುತ್ತಲೂ ನೋಡ ಬೇಡಿ, ಕೇಳುತ್ತಲೂ ಕೇಳಬೇಡಿ. ಕೇಳುತ್ತಾ ಯೋಚಿಸಬೇಡಿ, ಕೇಳುತ್ತಾ ಒಳಗಡೆ ಅಳವಡಿಸಿಕೊಳ್ಳಿ, ಹರಡಿಸಬೇಡಿ. ಈ ಹಳೆಯ ಸ್ಲೋಗನನ್ನು

ನೆನಪಿಡುವುದು ಅವಶ್ಯಕವಾಗಿದೆ ಏಕೆಂದರೆ ಹೇಗಾದರೆ ದಿನ-ಪ್ರತಿದಿನ ಎಲ್ಲರ ಹಳೆಯ ಶರೀರದ ಲೆಕ್ಕಾಚಾರವು ಸಮಾಪ್ತಿಯಾಗುತ್ತಿದೆಯೋ ಅದೇ ರೀತಿ ಎಲ್ಲರ ಹಳೆಯ ಸಂಸ್ಕಾರಗಳೆಂಬ ಹಳೆಯ ಕಾಯಿಲೆಗಳೂ ಹೊರಗೆ ಬಂದು ಸಮಾಪ್ತಿಯಾಗಲಿದೆ, ಅದಕ್ಕಾಗಿ ಭಯಬೀತರಾಗಬೇಡಿ ಈಗಂತೂ ಗೊತ್ತಿಲ್ಲ ಇನ್ನೂ ವಿಷಯಗಳಂತೂ ಹೆಚ್ಚಾಗುತ್ತಿವೆ, ಮೊದಲಂತು ಇರಲಿಲ್ಲ. ಯಾವುದೂ ಇರಲಿಲ್ಲ, ಅವು ಈಗ ಹೊರಬರುತ್ತಿವೆ, ಬರಲೇ ಬೇಕು. ನಿಮ್ಮ ಎದುರಿಸುವ ಶಕ್ತಿ, ಸಹನೆ ಶಕ್ತಿ, ಸಂಕೀರ್ಣ ಶಕ್ತಿ, ನಿರ್ಣಯ ಮಾಡುವ ಶಕ್ತಿಯ ಪೇಪರ್ ಇದೆ. ಏನು 10 ವರ್ಷದ ಮೊದಲು ಪೇಪರ್ ಬರುವುದೇ? ಬಿ.ಎ. ಕ್ಲಾಸ್ನ ಪೇಪರ್, ಎಮ್.ಎ ಕ್ಲಾಸ್ನಲ್ಲಿ ಬರುವುದೇ? ಅದಕ್ಕಾಗಿ ಏನಾಗುತ್ತದೆ ಎಂದು ಭಯಬೀತರಾಗಬೇಡಿ. ಇದಾಗುತ್ತದೆ, ಇದಾಗುತ್ತದೆ.. ಆಟವನ್ನು ನೋಡಿ. ಪೇಪರ್‌ಂತು ಪಾಸ್ ಆಗಿ, ಪಾಸ್ ವಿತ್ ಆನರ್ (ಗೌರವಾನ್ವಿತ್ ತೇರ್ಗಡೆ) ಆಗಿ.

ಬಾಪ್‌ದಾದಾರವರು ಮೊದಲೇ ತಿಳಿಸಿದ್ದಾರೆ -ಪಾಸ್ ಆಗುವುದಕ್ಕೆ ಎಲ್ಲದಕ್ಕಿಂತ ಸಹಜ ಸಾಧನವಾಗಿದೆ, ಬಾಪ್‌ದಾದಾರವರಿಗೆ ಸಮೀಪದಲ್ಲಿರಿ, ನಿಮಗೆ ಕೆಲಸಕ್ಕೆ ಬಾರದವುಗಳನ್ನು ದಾಟಿಬಿಡಿ ಅರ್ಥಾತ್ ಬಾಪ್‌ದಾದಾರವರಿಗೆ ಸಮೀಪವಾಗಿರಿ. ಕೆಲಸಕ್ಕೆ ಬಾರದ ದೃಶ್ಯಗಳನ್ನು ದಾಟಿಬಿಡಿ. ಅದನ್ನು ಪಾಸ್ ಆಗಲು ಬಿಡಿ, ಪಾಸ್ (ಹತ್ತಿರ) ಇರಿ, ಪಾಸ್ ಮಾಡಿ, ಪಾಸ್ ಆಗಿಬಿಡಿ. ಕಷ್ಟವಿದೆಯೇ? ಟೀಚರ್ಸ್ ತಿಳಿಸಿ, ಮಧುಬನದವರು ತಿಳಿಸಿ. ಮಧುಬನದವರು ಕೈ ಎತ್ತಿ. ಮಧುಬನದವರು ಮುಂದೆ ಬಂದು ಕುಳಿತುಕೊಳ್ಳುತ್ತೀರಿ, ಬುದ್ಧಿವಂತರಾಗಿದ್ದೀರಿ, ಭಲೇ ಬನ್ನಿ. ಬಾಪ್‌ದಾದಾರವರಿಗೆ ಖುಷಿಯಿದೆ. ತಮ್ಮ ಅಧಿಕಾರವನ್ನು ತೆಗೆದುಕೊಳ್ಳುತ್ತಿರಲ್ಲವೇ? ಒಳ್ಳೆಯದು, ಬಾಪ್‌ದಾದಾರವರು ಬೇಜಾರಾಗಿಲ್ಲ, ಭಲೇ ಮುಂದೆ ಕುಳಿತುಕೊಳ್ಳಿರಿ. ಮಧುಬನದಲ್ಲಿರುತ್ತೀರೆಂದರೆ ಏನಾದರೂ ಹತ್ತಿರದ ಸತ್ಕಾರವಾಗಬೇಕಲ್ಲವೇ! ಆದರೆ ಪಾಸ್ ಶಬ್ದ ನೆನಪಿಟ್ಟುಕೊಳ್ಳಿ. ಮಧುಬನದಲ್ಲಿ ಹೊಸ-ಹೊಸ ಮಾತುಗಳಾಗುತ್ತವೆಯಲ್ಲವೇ, ಡಕಾಯಿತರು ಬರುತ್ತಾರೆ. ಕೆಲವು ಹೊಸ-ಹೊಸ ಮಾತುಗಳು ಇರುತ್ತವೆ, ಈಗ ತಂದೆಯು ಸಾಮಾನ್ಯವಾಗಿ ಏನು ತಿಳಿಸಿದರು, ಸ್ವಲ್ಪ ಗುಪ್ತವಾಗಿ ಇಡುತ್ತಾರೆ ಆದರೆ ಮಧುಬನದವರು ತಿಳಿದುಕೊಂಡಿದ್ದಾರೆ. ಮನೋರಂಜನೆ ಮಾಡಿ, ತಬ್ಬಿಬ್ಬರಾಗಬೇಡಿ. ತಬ್ಬಿಬ್ಬರಾಗುವುದು ಅಥವಾ ಮನೋರಂಜನೆ ಎಂದು ತಿಳಿದು ಮೋಜಿನಲ್ಲಿ ಪಾಸ್ ಆಗುವುದು. ತಬ್ಬಿಬ್ಬರಾಗುವುದು ಒಳ್ಳೆಯದಾ ಅಥವಾ ಪಾಸ್ ಮಾಡಿ ಮೋಜಿನಲ್ಲಿರುವುದು ಒಳ್ಳೆಯದಾ? ಪಾಸ್ ಮಾಡಬೇಕಲ್ಲವೇ! ಪಾಸ್ ಆಗಬೇಕಲ್ಲವೇ! ಪಾಸ್ ಮಾಡಿ. ದೊಡ್ಡ ಮಾತೇನಿದೆ? ಯಾವುದೇ ದೊಡ್ಡ ಮಾತಿಲ್ಲ. ಮಾತನ್ನು ದೊಡ್ಡದನ್ನಾಗಿ ಮಾಡುವುದು ಮತ್ತು ಚಿಕ್ಕದನ್ನಾಗಿ ಮಾಡುವುದು, ತಮ್ಮ ಬುದ್ಧಿಯ ಮೇಲಿದೆ. ಯಾರು ಮಾತನ್ನು ದೊಡ್ಡದನ್ನಾಗಿ ಮಾಡುತ್ತಾರೆಯೋ ಅವರಿಗಾಗಿ ಅಜ್ಞಾನ ಕಾಲದಲ್ಲೂ ಹೇಳುತ್ತಾರೆ ಇವರು ಹಗ್ಗವನ್ನು ಹಾವ(ಸರ್ಪ)ನ್ನಾಗಿ ಮಾಡುವವರಾಗಿದ್ದಾರೆ. ಸಿಂಧಿ ಬಾಷೆಯಲ್ಲಿ ಹೇಳುತ್ತಾರೆ "ನೋರಿ ಕೊ ನಾಗ" ಮಾಡುತ್ತಾರೆ. ಇಂತಹ ಆಟವನ್ನು ಆಡಬೇಡಿ. ಈಗ ಈ ಆಟ ಸಮಾಪ್ತಿಯಾಗಲಿ.

ಇಂದು ವಿಶೇಷ ಸಮಾಚಾರವನ್ನಂತು ತಿಳಿಸಿದರಲ್ಲವೇ, ಬಾಪ್‌ದಾದಾರವರು ಈಗ ಒಂದು ಸಹಜ ಪುರುಷಾರ್ಥವನ್ನು ತಿಳಿಸುತ್ತಾರೆ, ಕಷ್ಟವಲ್ಲ. ಎಲ್ಲರಿಗೂ ತಂದೆಯ ಸಮಾನರಾಗಲೇಬೇಕೆಂಬ ಸಂಕಲ್ಪವಿದೆ. ಆಗಲೇಬೇಕು, ಪಕ್ಕಾ ಆಗಿದೆಯಲ್ಲವೇ! ವಿದೇಶಿಯರು ಆಗಲೇ ಬೇಕಲ್ಲವೇ? ಟೀಚರ್ಸ್ ಆಗಲೇ ಬೇಕಲ್ಲವೇ? ಇಷ್ಟೊಂದು ಟೀಚರ್ಸ್ ಬಂದಿದ್ದಾರೆ! ವಾಹ್! ಟೀಚರ್ಸ್ನ ಕಮಾಲ್ ಆಗಿದೆ. ಬಾಪ್‌ದಾದಾರವರು ಇಂದು ಟೀಚರ್ಸ್ನ ಖುಷಿಯ

ಸಮಾಚಾರವನ್ನು ತಿಳಿಸಿದರು. ಯಾವ ಖುಷಿಯ ಸಮಾಚಾರ, ತಿಳಿಸಿರಿ. ಟೀಚರ್ಸ್‌ಗೆ ಇಂದು ಸ್ವರ್ಣಿಮ ಬ್ಯಾಡ್ಜ ಸಿಕ್ಕಿತು. ಯಾರಿಗೆ ಗೋಲ್ಡನ್ (ಸ್ವರ್ಣಿಮ) ಬ್ಯಾಡ್ಜ್ ಸಿಕ್ಕಿದೆ, ಕೈ ಎತ್ತಿರಿ. ಪಾಂಡವರಿಗೂ ಸಿಕ್ಕಿದೆಯೇ? ತಂದೆಯ ಜೊತೆಗಾರರಂತು ಉಳಿದುಕೊಳ್ಳಬಾರದಲ್ಲವೇ. ಪಾಂಡವರು ಬ್ರಹ್ಮಾ ತಂದೆಯ ಸಮಾನರಾಗಿದ್ದಾರೆ. (ಅವರಿಗೆ ಬೇರೆ ಪ್ರಕಾರದ ಗೋಲ್ಡನ್ ಸಿಕ್ಕಿದೆ) ಪಾಂಡವರಿಗೆ ರಾಯಲ್ ಗೋಲ್ಡ ಮೆಡೆಲ್ ಇದೆ. ಗೋಲ್ಡನ್ ಮೆಡಲ್ನವರಿಗೆ ಬಾಪ್‌ದಾದಾರವರ ಲಕ್ಷ-ಕೋಟಿಯಷ್ಟು ಶುಭಾಷಯಗಳು, ಶುಭಾಷಯಗಳು, ಶುಭಾಷಯಗಳು. ದೇಶ-ವಿದೇಶದಲ್ಲಿದ್ದು ಬಾಪ್‌ದಾದಾರವರ ಮಹಾವಕ್ಯಗಳನ್ನು ಕೇಳುತ್ತಿದ್ದಾರೆ, ಮತ್ತು ಗೋಲ್ಡನ್ ಮೆಡಲ್ ಸಿಕ್ಕಿ ಬಿಟ್ಟಿದೆ, ಅವರೆಲ್ಲರೂ ತಿಳಿಯುತ್ತಾರೆ ನಮ್ಮೆಲ್ಲರಿಗೂ ಬಾಪ್‌ದಾದಾರವರು ಶುಭಾಷಯಗಳನ್ನು ಕೊಟ್ಟಿದ್ದಾರೆ, ಭಲೇ ಪಾಂಡವರಾಗಿರಲಿ, ಶಕ್ತಿಯರಾಗಿರಲಿ ಯಾವುದೇ ಕಾರ್ಯದ ನಿಮಿತ್ತರನ್ನಾಗಿ ಮಾಡುವಂತಹರಿಗೆ ವಿಶೇಷವಾಗಿ ಈ ದಾದಿಯರು, ಪಾರಿವಾರದಲ್ಲಿರುವವರಿಗೂ ಯಾವುದೇ ವಿಶೇಷತೆಯ ಆಧಾರದ ಮೇಲೆ ಗೋಲ್ಡನ್ ಮೆಡಲ್ ಕೊಡುತ್ತಾರೆ. ಯಾರಿಗೆಲ್ಲಾ ಯಾವ ವಿಶೇಷತೆಯ ಆಧಾರದ ಮೇಲೆ, ಸರ್ಮಪಣೆಯ ಆಧಾರದ ಮೇಲಿರಬಹುದು, ಯಾರೇ ಸೇವೆಯಲ್ಲಿ ವಿಶೇಷ ಮುಂದುವರೆಯುವಂತಹ ದಾದಿಯರ ಮೂಲಕ ಸಹ ಗೋಲ್ಡನ್ ಮೆಡಲ್ ಸಿಕ್ಕಿದೆಯೋ ದೂರದಲ್ಲಿ ಕುಳಿತು ಕೇಳುವಂತಹವರಿಗೂ ಸಹ ಬಹಳ ಬಹಳ ಶುಭಾಷಯಗಳು. ನೀವೆಲ್ಲರೂ ದೂರದಲ್ಲಿ ಕುಳಿತು ಮುರಳಿ ಕೇಳುವಂತಹವರಿಗೆ, ಗೋಲ್ಡನ್ ಮೆಡಲ್ನವರಿಗೆ ಒಂದು ಕೈಯಿನ ಚಪ್ಪಾಳೆ ತಟ್ಟಿರಿ, ಅವರು ನಿಮ್ಮ ಚಪ್ಪಾಳೆ ನೋಡುತ್ತಿದ್ದಾರೆ. ಅವರು ಸಹ ನಗುತ್ತಿದ್ದಾರೆ, ಖುಷಿಯಾಗಿದ್ದಾರೆ.

ಬಾಪ್‌ದಾದಾರವರು ಸಹಜ ಪುರುಷಾರ್ಥವನ್ನು ತಿಳಿಸುತ್ತಿದ್ದಾರೆ – ಈಗ ಸಮಯವಂತು ಇದ್ದಕ್ಕಿದ್ದಂತೆ ಆಗುವುದು, ಒಂದು ಗಂಟೆಯ ಮೊದಲು ಸಹ ಬಾಪ್‌ದಾದಾರವರು ಘೋಷಣೆ ಮಾಡುವುದಿಲ್ಲ, ಮಾಡುವುದಿಲ್ಲ, ಮಾಡುವುದಿಲ್ಲ. ನಂಬರ್ ಹೇಗೆ ಆಗುವುದು? ಇದ್ದಕ್ಕಿದ್ದಂತೆ ಆಗಲಿಲ್ಲವೆಂದರೆ ಪೇಪರ್ ಹೇಗೆ ಆಗುವುದು? ಪಾಸ್ ವಿತ್ ಆನರ್ನ (ಗೌರವಾನ್ವಿತ್ ತೇರ್ಗಡೆಯ) ಸರ್ಟಿಫಿಕೇಟ್, ಫೈನಲ್ ಸರ್ಟಿಫಿಕೇಟ್‌ಂತು ಇದ್ದಕ್ಕಿದ್ದಂತೆ ಆಗಬೇಕಾಗಿದೆ ಅದಕ್ಕಾಗಿ ದಾದಿಯರ ಒಂದು ಸಂಕಲ್ಪ ಬಾಪ್‌ದಾದಾರವರ ಹತ್ತಿರ ತಲುಪಿದೆ. ದಾದಿಯರು ಬಯಸುತ್ತಾರೆ – ಈಗ ಬಾಪ್‌ದಾದಾರವರ ಸಾಕ್ಷಾತ್ಕಾರದ ಚಾವಿ ತೆರೆಯಲಿ, ಇಶು ಇವರ ಸಂಕಲ್ಪವಾಗಿದೆ. ನೀವೆಲ್ಲರೂ ಬಯಸುತ್ತೀರಾ? ಬಾಪ್‌ದಾದಾರವರು ಚಾವಿಯನ್ನು ತೆರೆಯುವವರೇ ಅಥವಾ ನೀವು ನಿಮಿತ್ತರಾಗುವಿರಾ? ಒಳ್ಳೆಯದು ಬಾಪ್‌ದಾದಾರವರು ಚಾವಿಯನ್ನು ತೆರೆಯುವರು, ಸರಿಯಿದೆ. ಬಾಪ್‌ದಾದಾರವರು ಹಾಂ ಜೀ ಮಾಡುತ್ತಾರೆ, (ಚಪ್ಪಾಳೆ ತಟ್ಟಿದ್ದರು) ಮೊದಲು ಪೂರ್ಣ ಕೇಳಿರಿ. ಬಾಪ್‌ದಾದಾರವರಿಗೆ ಚಾವಿ ತೆಗೆಯುವುದರಲ್ಲಿ ಏನು ತಡವಿದೆ, ಆದರೆ ಯಾರ ಮೂಲಕ ಮಾಡಿಸುವರು? ಪ್ರತ್ಯಕ್ಷತೆಯನ್ನು ಯಾರು ಮಾಡಬೇಕು? ಮಕ್ಕಳೋ ಅಥವಾ ತಂದೆಯೋ? ಮಕ್ಕಳ ಮೂಲಕ ತಂದೆಯು ಪ್ರತ್ಯಕ್ಷವಾಗಬೇಕು ಏಕೆಂದರೆ ಒಂದುವೇಳೆ ಜ್ಯೋತಿರ್ಬಿಂದುವಿನ ಸಾಕ್ಷಾತ್ಕಾರವಾದರೂ ಸಹ ಕೆಲವರು ಬಡಪಾಯಿ..., ಬಡಪಾಯಿಗಳಲ್ಲವೇ! ಇದು ಏನೆಂದು ಸಹ ತಿಳಿದುಕೊಳ್ಳುವುದಿಲ್ಲ. ಅಂತಿಮದಲ್ಲಿ ಶಕ್ತಿಯರು ಮತ್ತು ಪಾಂಡವ ಮಕ್ಕಳ ಮೂಲಕ ತಂದೆಯ ಪ್ರತ್ಯಕ್ಷವಾಗುತ್ತದೆ. ಬಾಪ್‌ದಾದಾರವರು ಇದನ್ನೇ ಹೇಳುತ್ತಿದ್ದಾರೆ. ಎಲ್ಲಾ ಮಕ್ಕಳಿಗೆ ತಂದೆಯ ಸಮಾನವಾಗಲೇಬೇಕು ಎಂಬ ಒಂದೇ ಸಂಕಲ್ಪವಿದೆ, ಇದರಲ್ಲಿ ಎರಡು ವಿಚಾರಗಳಲಿಲ್ಲ ಅಲ್ಲವೇ! ಒಂದೇ ವಿಚಾರವಿದೆಯಲ್ಲವೇ. ಬ್ರಹ್ಮಾ ತಂದೆಯನ್ನು ಫಾಲೋ ಮಾಡಿ. ಅಶರೀರಿ, ಬಿಂದು ಸ್ವತಃವಾಗಿ ಆಗಿಬಿಡುವಿರಿ. ಬ್ರಹ್ಮಾತಂದೆಯೊಂದಿಗೆ ಎಲ್ಲರದು ಪ್ರೀತಿಯಿದೆ. ಇದನ್ನು ತಂದೆಯು ಹೆಚ್ಚು ನೋಡಿದ್ದಾರೆ. ಎಲ್ಲರದೂ ಪ್ರೀತಿಯಿದೆ, ಆದರೆ

ವಿದೇಶಿಯರಿಗೆ ಬ್ರಹ್ಮಾ ತಂದೆಯ ಮೇಲೆ ಬಹಳ ಪ್ರೀತಿಯಿದೆ. ಕಣ್ಣಿನ ಮೂಲಕ ನೋಡಿಲ್ಲ ಆದರೆ ಅನುಭವದ ನೇತ್ರದ ಮೂಲಕ ವಿದೇಶಿಯರು ಹೆಚ್ಚಾಗಿ ಬ್ರಹ್ಮಾ ಬಾಬಾರವರನ್ನು ನೋಡಿದ್ದಾರೆ ಮತ್ತು ಬಹಳ ಪ್ರೀತಿಯಿದೆ. ಭಾರತದ ಗೋಪಿಕೆಯರು, ಗೋಪರು ಇದ್ದಾರೆ ಆದರೂ ಬಾಪ್‌ದಾದಾರವರು ಕೆಲ-ಕೆಲವೊಮ್ಮೆ ವಿದೇಶಿಯರ ಅನುಭವದ ಕಥೆಗಳನ್ನು ತಿಳಿಸುತ್ತಾರೆ, ಭಾರತವಾಸಿಯರು ಸ್ವಲ್ಪ ಗುಪ್ತವಾಗಿ ಇಡುತ್ತಾರೆ, ಅವರಾದರೆ ಅವರ ಎಲ್ಲಾ ಕಥೆಗಳನ್ನು ಬ್ರಹ್ಮಾ ತಂದೆಯ ಮುಂದೆ ಸ್ಪಷ್ಟವಾಗಿ ತಿಳಿಸುತ್ತಾರೆ. ಬಾಪ್‌ದಾದಾ ಇತರರಿಗೂ ತಿಳಿಸುತ್ತಾರೆ ವಿದೇಶಿಯರಿಗೆ ಶುಭಾಶಯಗಳು ಲಂಡನ್, ಅಮೆರಿಕಾ, ಆಸ್ಟ್ರೇಲಿಯಾ, ಆಫ್ರಿಕಾ, ಏಷ್ಯಾ, ರಷ್ಯಾ, ಜರ್ಮನಿ ನಾಲ್ಕು ಕಡೆ ಇರುವ ವಿದೇಶಿಯರೆಲ್ಲರೂ ದೂರದಲ್ಲಿದ್ದು ಸಹ ಕೇಳುತ್ತಿದ್ದಾರೆ. ಅವರಿಗೂ ಸಹ ಬಾಪ್‌ದಾದಾರವರು ಶುಭಾಶಯಗಳನ್ನು ಕೊಡುತ್ತಿದ್ದಾರೆ. ವಿಶೇಷವಾಗಿ ಬ್ರಹ್ಮಾ ತಂದೆ ಶುಭಾಶರ್ಯಗಳನ್ನು ಕೊಡುತ್ತಿದ್ದಾರೆ. ಭಾರತವಾಸಿಯರು ಗುಪ್ತವಾಗಿ ಇಡುತ್ತಾರೆ ಅಷ್ಟು ಪ್ರಸಿದ್ಧ ಮಾಡುವುದಿಲ್ಲ, ಗುಪ್ತವಾಗಿಡುತ್ತಾರೆ. ಈಗ ನೀವು ಸಹ ಪ್ರತ್ಯಕ್ಷ ಮಾಡಿ. ಬಾಕಿ ಭಾರತದಲ್ಲಿಯೂ ಬಹಳ ಒಳ್ಳೊಳ್ಳೆಯವರಿದ್ದಾರೆ. ಇಂತಹ ಗೋಪಿಕೆಯರಿದ್ದಾರೆ, ಒಂದುವೇಳೆ ಅವರ ಅನುಭವ ಇಂದಿನ ಪ್ರಧಾನಮಂತ್ರಿ, ರಾಷ್ಟ್ರಪತಿಯೂ ಕೇಳಿದರೆ ಅವರ ಕಣ್ಣಿನಿಂದಲೂ ಕಣ್ಣೀರು ಬಂದು ಬಿಡುತ್ತದೆ. ಇಂತಹ ಅನುಭವವಿದೆ ಆದರೆ ಗುಪ್ತವಾಗಿ ಇಡುತ್ತಾರೆ ತೆರೆಯುವುದಿಲ್ಲ, ಅವಕಾಶವು ಕಡಿಮೆ ಸಿಗುತ್ತದೆ. ಬಾಪ್‌ದಾದಾ ತಿಳಿಸುತ್ತಿದ್ದಾರೆ ಬ್ರಹ್ಮಾ ತಂದೆಯೊಂದಿಗೆ ಎಲ್ಲರ ಪ್ರೀತಿಯಿದೆ, ಅದಕ್ಕಾಗಿ ತಮ್ಮನ್ನು ಏನೆಂದು ಹೇಳಿಕೊಳ್ಳುತ್ತಿರಿ? ಬ್ರಹ್ಮಾಕುಮಾರಿ ಅಥವಾ ಶಿವಕುಮಾರಿ? ಬ್ರಹ್ಮಾಕುಮಾರಿ ಎಂದು ಹೇಳಿಕೊಳ್ಳುತ್ತಿರಲ್ಲವೇ, ಬ್ರಹ್ಮಾ ತಂದೆಯೊಂದಿಗೆ ಪ್ರೀತಿಯಿದೆಯಲ್ಲವೇ. ಅಶರೀರಿಯಾಗುವುದರಲ್ಲಿ ಸ್ವಲ್ಪ ಪರಿಶ್ರಮ ಪಡಬೇಕಾಗುತ್ತದೆ ಆದರೆ ಬ್ರಹ್ಮಾ ತಂದೆ ಈಗ ಯಾವ ರೂಪದಲ್ಲಿದ್ದಾರೆ? ಯಾವ ರೂಪದಲ್ಲಿದ್ದಾರೆ? ಹೇಳಿರಿ? (ಫರಿಶ್ತಾ ರೂಪದಲ್ಲಿದ್ದಾರೆ) ಬ್ರಹ್ಮಾರವರೊಂದಿಗೆ ಪ್ರೀತಿ ಎಂದರೆ ಫರಿಶ್ತಾ ರೂಪದೊಂದಿಗೆ ಪ್ರೀತಿ. ಭಲೇ ಬಿಂದು ಆಗುವುದರಲ್ಲಿ ಕಷ್ಟವಾಗುತ್ತದೆ, ಫರಿಶ್ತಾ ಆಗುವುದು ಅದಕ್ಕಿಂತಲೂ ಸಹಜವಾಗಿದೆ. ತಿಳಿಸಿರಿ, ಬಿಂದು ರೂಪದಿಂದ ಫರಿಶ್ತಾ ರೂಪವಂತು ಸಹಜವಾಗಿದೆಯಲ್ಲವೇ! ನೀವು ಅಕೌಂಟ್ನ ಕಾರ್ಯ ಮಾಡುತ್ತಾ ಬಿಂದು ಆಗಲು ಸಾಧ್ಯವೇ? ಫರಿಶ್ತೆಯಂತು ಆಗಬಹುದಲ್ಲವೇ! ಬಿಂದು ರೂಪದಲ್ಲಿ ಕರ್ಮ ಮಾಡುತ್ತಾ ಕೆಲ-ಕೆಲವೊಮ್ಮೆ ವ್ಯಕ್ತ ಶರೀರದಲ್ಲಿ ಬಂದು-ಹೋಗಬೇಕಾಗುತ್ತದೆ. ವಿಜ್ಞಾನದವರು ಒಂದು ಪ್ರಕಾಶದ ಆಧಾರದಿಂದ ರೊಬೋಟನ್ನು (ಯಂತ್ರಮಾನವ) ತಯಾರು ಮಾಡಿದರು ಎಂದು ಬಾಪ್‌ದಾದಾರವರು ಕೇಳಿಸಿಕೊಂಡರು, ಕೇಳಿದ್ದೀರಲ್ಲವೇ! ನೋಡಿಲ್ಲವೆಂದರೆ ಕೇಳಿದ್ದೀರಲ್ಲವೇ! ಮಾತೆಯರು ಕೇಳಿದ್ದೀರಲ್ಲವೇ? ನಿಮಗೆ ಚಿತ್ರ ತೋರಿಸುತ್ತೇವೆ. ಅವರು ಲೈಟ್ನ ಆಧಾರದಿಂದ ರೊಬೋಟ್ ಮಾಡಿದರು ಮತ್ತು ಅದು ಎಲ್ಲಾ ಕೆಲಸವನ್ನು ಮಾಡುತ್ತದೆ. ಮತ್ತು ತೀವ್ರ ಗತಿಯಿಂದ ಮಾಡುತ್ತದೆ, ಲೈಟ್ನ ಆಧಾರದಿಂದ. ಮತ್ತು ವಿಜ್ಞಾನದ ಪ್ರತ್ಯಕ್ಷ ಪ್ರಮಾಣವಾಗಿದೆ. ಬಾಪ್‌ದಾದಾರವರು ಹೇಳುತ್ತಾರೆ - ಶಾಂತಿಯ ಶಕ್ತಿಯಿಂದ, ಶಾಂತಿಯ ಲೈಟ್ನಿಂದ ನೀವು ಕರ್ಮ ಮಾಡಲು ಸಾಧ್ಯವಿಲ್ಲವೇ? ಮಾಡಲು ಸಾಧ್ಯವಿಲ್ಲವೇ? ಇಂಜಿನಿಯರ್ ಮತ್ತು ವಿಜ್ಞಾನದವರು ಕುಳಿತಿದ್ದೀರಲ್ಲವೇ! ನೀವು ಸಹ ಒಂದು ಆತ್ಮಿಕ ರೊಬೋಟ್ನ ಸ್ಥಿತಿಯನ್ನು ತಯಾರು ಮಾಡಿ. ಅದಕ್ಕೆ ಆತ್ಮಿಕ ಕರ್ಮಯೋಗಿ, ಫರಿಶ್ತಾ ಕರ್ಮಯೋಗಿ ಎಂದು ಹೇಳಲಾಗುತ್ತದೆ. ಮೊದಲು ನೀವು ತಯಾರಿಯಾಗಿಬಿಡಿ. ಇಂಜಿನಿಯರ್ ಅವರು ಇದ್ದೀರಿ, ವಿಜ್ಞಾನದವರೂ ಇದ್ದೀರಿ ಅಂದಾಗ ಮೊದಲು ನೀವು ಅನುಭವ ಮಾಡಬೇಕು. ಮಾಡುತ್ತೀರಾ? ಮಾಡಬಹುದೇ? ಒಳ್ಳೆಯದು, ಇಂತಹ ಪ್ಲಾನ್ ಮಾಡಿ. ಬಾಪ್‌ದಾದಾರವರು ಇಂತಹ

ಆತ್ಮಿಕ ನಡೆಯುತ್ತಾ ತಿರುಗಾಡುತ್ತಾ ಕರ್ಮಯೋಗಿ ಫರಿಶ್ತೆಗಳನ್ನು ನೋಡಲು ಬಯಸುತ್ತಾರೆ. ಅಮೃತವೇಳೆಯಲ್ಲಿ ಎದ್ದೇಳಿ, ಬಾಪ್‌ದಾದಾರವರೊಂದಿಗೆ ಮಿಲನ ಮಾಡಿ, ಆತ್ಮಿಕ ವಾರ್ತಾಲಾಪ ಮಾಡಿ, ವರದಾನವನ್ನು ತೆಗೆದುಕೊಳ್ಳಿ ಏನು ಮಾಡಬೇಕೋ ಅದನ್ನು ಮಾಡಿ. ಆದರೆ ಬಾಪ್‌ದಾದಾರವರಿಂದ ಪ್ರತಿದಿನ ಅಮೃತವೇಳೆ ಕರ್ಮಯೋಗಿ ಫರಿಶ್ತಾ ಭವ!ದ ವರದಾನವನ್ನು ತೆಗೆದುಕೊಂಡು ನಂತರ ಕೆಲಸ-ಕಾರ್ಯಗಳಲ್ಲಿ ಬನ್ನಿ. ಇದು ಆಗಬಹುದೇ?

ಮಧುಬನದವರು ಕೈಯನ್ನೆತ್ತಿರಿ. ದೊಡ್ಡದಾಗಿ ಎತ್ತಿರಿ, ಚಿಕ್ಕದಾಗಿ ಎತ್ತಿದ್ದೀರಿ. ಮಧುಬನದಲ್ಲಿ ಅಕ್ಕಂದಿರು ಕೈಯನ್ನು ಎತ್ತುತ್ತಾರೆ. ಮಧುಬನದ ತರಂಗಗಳು ನಾಲ್ಕೂ ಕಡೆ ಹರಡುತ್ತವೆ. ಫರಿಶ್ತಾ ರೂಪದಲ್ಲಿ ಕರ್ಮಯೋಗಿಯಾಗಿ, ಡಬಲ್ ಲೈಟ್ ಆಗಿ, ಪ್ರಕಾಶಮಯ ಶರೀರದಿಂದ ಹಗುರವಾಗಿ ಕರ್ಮ ಮಾಡುತ್ತಿದ್ದೇನೆ ಎಂದು ಭಾವಿಸಬೇಕು. ಮಾತನಾಡಿದರೂ, ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರೂ, ಫರಿಶ್ತಾ ರೂಪದಲ್ಲಿ ಮಾಡಿರಿ. ಯಾವ ವಿಷಯದೊಂದಿಗೆ ಯಾರಿಗೆ ಅವಶ್ಯಕತೆ ಇದೆಯೋ ಅವರೊಬ್ಬರೇ ಕೇಳಿಸಿಕೊಳ್ಳಬೇಕು. ಇತರರು ಕೇಳಿಸಿಕೊಳ್ಳಬಾರದು.

ವಾತಾವರಣ ಏಕೆ ತಯಾರಾಗುತ್ತಿದೆ? ಯಾವ ಚಿಕ್ಕ ವಿಷಯದ ಬಗ್ಗೆಯಾದರೂ ಆಗಲಿ ಅಂತಹ ವಾತಾವರಣ ಏಕೆ ತಯಾರಾಗುತ್ತಿದೆ ಎಂದರೆ ಆ ವಿಷಯದ ಬಗ್ಗೆ ಮಾತನಾಡುತ್ತಿರುವಾಗ ಆ ವಿಷಯದೊಂದಿಗೆ ಸಂಬಂಧವಿರದವರ ಕಿವಿಯಲ್ಲಿ ಕೂಡ ಬೀಳುವ ಹಾಗೆ ಮಾತನಾಡುತ್ತಾರೆ. ಆಗ ಅವರಿಗೂ ಸಹ ವ್ಯರ್ಥ ಸಂಕಲ್ಪಗಳು ಬರುವುದು ಪ್ರಾರಂಭವಾಗುತ್ತದೆ. ಆದ್ದರಿಂದ ಫರಿಶ್ತಾ ಅರ್ಥಾತ್ ಆ ವಿಷಯಗಳೊಂದಿಗೆ ಯಾರಿಗೆ ಅವಶ್ಯಕತೆ ಇದೆಯೋ ಅವರೇ ಕೇಳಿಸಿಕೊಳ್ಳಬೇಕು. ಎಷ್ಟು ಅವಶ್ಯಕತೆ ಇದೆಯೋ ಅಷ್ಟರಮಟ್ಟಿಗೆ ಮಾತ್ರ ಮಾತನಾಡಬೇಕು. ಕಥೆಯಂತೆ ತಯಾರು ಮಾಡಿ ಹೇಳಬೇಡಿರಿ. ವಿಷಯವನ್ನು ಕಥೆಯಂತೆ ಮಾಡಬೇಡಿರಿ. ಕಥೆಯಲ್ಲಿ ತಪ್ಪದೇ ಕಲಬೆರಕೆ ಇರುತ್ತದೆ ಮತ್ತು ಕಥೆಗಳು ದೊಡ್ಡದಾಗಿ ಇರುತ್ತವೆ. ಬ್ರಹ್ಮಾ ತಂದೆಯ ಪ್ರೀತಿಗೆ ಹಿಂತಿರುಗಿ ಕೊಡುವುದು ಅರ್ಥಾತ್ ಬ್ರಹ್ಮಾ ತಂದೆಯ ಸಮಾನವಾದ ಕರ್ಮಯೋಗಿ ಭವ!

ಬಾಪ್‌ದಾದಾ ಹೇಳುವುದು ಕೂಡ ಇದೇ- ಈ ಸ್ಥಿತಿಯ ಭೂಮಿಯನ್ನು ತಯಾರು ಮಾಡಿರಿ ಆಗ ಬಾಪ್‌ದಾದಾ ಮಕ್ಕಳಿಂದ ಸಾಕ್ಷಾತ್ ತಂದೆಯ ಸಾಕ್ಷಾತ್ಕಾರವನ್ನು ತಪ್ಪದೇ ಮಾಡಿಸುತ್ತಾರೆ. ಸಾಕ್ಷಾತ್ ತಂದೆ ಮತ್ತು ಸಾಕ್ಷಾತ್ಕಾರ ಈ ಎರಡು ವಿಷಯಗಳನ್ನು ನೆನಪಿಟ್ಟುಕೊಳ್ಳಿರಿ. ಕೇವಲ ಫರಿಶ್ತಾ ಅಷ್ಟೇ ಸೇವೆ ಮಾಡುತ್ತಿದ್ದರೂ, ಶ್ರೇಷ್ಠ ಸ್ಥಿತಿಯಿಂದ ಫರಿಶ್ತಾ ಆಗಿ ಬಂದಿದ್ದೀರಿ, ಸಂದೇಶವನ್ನು ಕೊಟ್ಟಿದ್ದೀರಿ ಮತ್ತು ಹಿಂತಿರುಗಿ ಮನೆಗೆ ಹೋಗಿ ಬಿಟ್ಟಿದ್ದೀರಿ ಅಷ್ಟೇ, ಶ್ರೇಷ್ಠ ಸ್ಮೃತಿಯಲ್ಲಿ ಹೋಗಿಬಿಟ್ಟಿದ್ದೀರಿ.

ಈಗಿನ ಸಮಯವನ್ನು ಅನುಸರಿಸಿ ಅಲ್ಲಲ್ಲಿ ನೀರಿಗಾಗಿ ಹೇಗಾದರೆ ಬಾಯಾರಿಕೆಯಿಂದ ಇದ್ದಾರೆಯೋ ಹಾಗೆಯೇ ವರ್ತಮಾನ ಸಮಯದಲ್ಲಿ ಶುದ್ಧವಾದ ಶಾಂತಿಮಯ, ಸುಖಮಯ ತರಂಗಗಳಿಗಾಗಿ ಬಾಯಾರಿದ್ದಾರೆ. ಫರಿಶ್ತಾ ರೂಪದಿಂದಲೇ ತರಂಗಗಳನ್ನು ವ್ಯಾಪಿಸಬಲ್ಲಿರಿ. ಫರಿಶ್ತಾ ಅರ್ಥಾತ್ ಸದಾ ಶ್ರೇಷ್ಠ ಸ್ಥಿತಿಯಲ್ಲಿ ಇರುವವರು, ಫರಿಶ್ತಾ ಅರ್ಥಾತ್ ಹಳೆಯ ಪ್ರಪಂಚ ಮತ್ತು ಹಳೆಯ ಸಂಸ್ಕಾರಗಳೊಂದಿಗೆ ಸಂಬಂಧವಿಲ್ಲ. ಪ್ರಪಂಚ ಪರಿವರ್ತನೆ ಎಂಬುವುದು ನಿಮ್ಮೆಲ್ಲರ ಸಂಸ್ಕಾರಗಳ ಪರಿವರ್ತನೆಗಾಗಿ ನಿಂತಿದೆ ಆದ್ದರಿಂದ ಈ ಹೊಸ ವರ್ಷದಲ್ಲಿ ಸಂಸ್ಕಾರದ

ಪರಿವರ್ತನೆಯ ಲಕ್ಷ್ಯವನ್ನು ಇಟ್ಟುಕೊಳ್ಳಿ, ಸ್ವಯಂನ ಹಾಗೂ ಸಹಯೋಗದ ಮೂಲಕ ಅನ್ಯರದ್ದು ಸಹ ಯಾವುದಾದರೂ ಬಲಹೀನತೆ ಇದ್ದರೆ ಸಹಯೋಗ ಕೊಡಿ, ವರ್ಣನೆ ಮಾಡಬೇಡಿ, ವಾತಾವರಣವನ್ನು ತಯಾರು ಮಾಡಬೇಡಿ. ಸಹಯೋಗ ಕೊಡಿ. ಈ ವರ್ಷದ ವಿಷಯವಾಗಿದೆ “ಸಂಸ್ಕಾರ ಪರಿವರ್ತನೆ”. ಫರಿಶ್ತಾ ಸಂಸ್ಕಾರ, ಬ್ರಹ್ಮಾ ತಂದೆಯ ಸಮಾನ ಸಂಸ್ಕಾರ. ಸಹಜ ಪುರುಷಾರ್ಥವಾಗಿದೆಯೇ ಅಥವಾ ಕಷ್ಟವಿದೆಯೇ? ಸ್ವಲ್ಪ-ಸ್ವಲ್ಪ ಕಷ್ಟವಿದೆಯೇ? ಎಂದೂ ಯಾವುದೇ ಮಾತು ಕಷ್ಟವಾಗುವುದಿಲ್ಲ, ತಮ್ಮ ಬಲಹೀನತೆ ಕಷ್ಟವನ್ನಾಗಿ ಮಾಡಿಬಿಡುತ್ತದೆ, ಅದಕ್ಕೆ ಬಾಪ್‌ದಾದಾರವರು ಹೇಳುತ್ತಾರೆ “ಹೇ ಮಾಸ್ಟರ್ ಸರ್ವಶಕ್ತಿವಾನ್ ಮಕ್ಕಳೇ, ಈಗ ಶಕ್ತಿಯರ ವಾಯುಮಂಡಲವನ್ನು ಹರಡಿಸಿ.” ಈಗ ವಾಯುಮಂಡಲಕ್ಕೆ ಬಹಳ-ಬಹಳ-ಬಹಳ ನಿಮ್ಮ ಅವಶ್ಯಕತೆಯಿದೆ. ಹೇಗೆ ಇತ್ತಿಚೆಗೆ ವಿಶ್ವದಲ್ಲಿ ಮಾಲಿನ್ಯದ ತೊಂದರೆಯಿದೆ, ಇಂತಹ ವಿಶ್ವದಲ್ಲಿ ಒಂದು ಕ್ಷಣ ಮನಸ್ಸಿನ ಶಾಂತಿ, ಸುಖದ ವಾಯುಮಂಡಲದ ಅವಶ್ಯಕತೆಯಿದೆ ಏಕೆಂದರೆ ಮನಸ್ಸಿನ ಮಾಲಿನ್ಯ ಬಹಳಷ್ಟಿದೆ, ವಾಯು ಮಾಲಿನ್ಯಕಿಂತಲೂ ಹೆಚ್ಚಾಗಿದೆ. ಒಳ್ಳೆಯದು.

**ನಾಲ್ಕಾರು ಕಡೆಯ ಬಾಪ್‌ದಾದಾರವರ ಸಮಾನರಾಗಲೇಬೇಕು ಎಂಬ ಲಕ್ಷ್ಯವನ್ನು ಇಟ್ಟುಕೊಂಡ ನಿಶ್ಚಯ ಬುದ್ಧಿ ವಿಜಯಿ ಆತ್ಮರಿಗೆ, ಸದಾ ಹಳೆಯ ಸಂಸಾರ ಮತ್ತು ಹಳೆಯ ಸಂಸ್ಕಾರಗಳನ್ನು ದೃಢ ಸಂಕಲ್ಪದ ಮೂಲಕ ಪರಿವರ್ತನೆ ಮಾಡುವಂತಹ ಮಾಸ್ಟರ್ ಸರ್ವಶಕ್ತಿವಾನ್ ಆತ್ಮರಿಗೆ, ಸದಾ ಯಾವುದೇ ಕಾರಣದಿಂದ ಸಂದರ್ಭಗಳಿಂದ ಸ್ವಭಾವ-ಸಂಸ್ಕಾರದಿಂದ ಬಲಹೀನವಾಗಿರುವ ಆತ್ಮರಿಗೆ ಸಹಯೋಗ ಕೊಡುವಂತಹ, ಕಾರಣ ನೋಡುವಂತಹವರಲ್ಲ, ನಿವಾರಣೆ ಮಾಡುವಂತಹವರು ಇಂತಹ ಧೈರ್ಯವುಳ್ಳ ಆತ್ಮರಿಗೆ, ಸದಾ ಬ್ರಹ್ಮಾ ತಂದೆಯ ಸ್ನೇಹದ ರಿಟರ್ನ್ ಕೊಡುವಂತಹ ಕರ್ಮಯೋಗಿ ಫರಿಶ್ತಾ ಆತ್ಮರಿಗೆ ಬಾಪ್‌ದಾದಾರವರ ನೆನಪು ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 16-12-2000.

***ಸಾಕ್ಷಾತ್ ಬ್ರಹ್ಮಾ ತಂದೆಯ ಸಮಾನ ಕರ್ಮಯೋಗಿ ಫರಿಶ್ತೆಗಳಾಗಿ ಆಗ ಸಾಕ್ಷಾತ್ಕಾರ ಪ್ರಾರಂಭವಾಗುವುದು.***

ನೀವೆಲ್ಲರೂ ಎಷ್ಟು ತನು, ಮನ, ಧನಗಳನ್ನು ಸಫಲ ಮಾಡಿಕೊಳ್ಳುತ್ತಿರೋ ಅಷ್ಟೇ ಸಫಲತೆಯ ನಕ್ಷತ್ರವಾಗುತ್ತಿರಿ. ಅವಿನಾಶಿ ತಂದೆಯ ಹತ್ತಿರ ನಿಮ್ಮ ಖಾತೆ ಒಂದಕ್ಕೆ ಪಧಮದಷ್ಟು ಜಮಾ ಆಗಿಬಿಡುತ್ತದೆ ಒಂದಕ್ಕೆ ಪಧಮದಷ್ಟು ಕೊಡಲು ತಂದೆ ಬಂಧಿಸಲ್ಪಟ್ಟಿದ್ದಾರೆ. ಉತ್ತೀರ್ಣರಾಗಲು ಎಲ್ಲದಕ್ಕಿಂತಲೂ ಸಹಜ ಸಾಧನ ಬಾಪ್‌ದಾದಾರವರಿಗೆ ಸಮೀಪವಾಗಿರಿ. ನಿಮಗೆ ಕೆಲಸಕ್ಕೆ ಬಾರದ ದೃಶ್ಯಗಳನ್ನು, ವಿಷಯಗಳನ್ನು ದಾಟಿಬಿಡಿ. ಅಮೃತ ವೇಳೆ ಆತ್ಮಿಕ ಸಂಭಾಷಣೆ ಮಾಡಿರಿ. ವರದಾನಗಳನ್ನು ಪಡೆಯಿರಿ. ಏನು ಮಾಡಬೇಕೆಂದರೆ ಅದನ್ನು ಮಾಡಿ ಆದರೆ ಪ್ರತಿದಿನ ಅಮೃತ ವೇಳೆ ತಂದೆಯಿಂದ ಕರ್ಮ ಯೋಗಿ ಪರಿಶ್ತಾ ಭವ! ಎಂಬ ವರದಾನವನ್ನು ಪಡೆದು ಕಾರ್ಯ ವ್ಯವಹಾರಗಳಲ್ಲಿ ಬನ್ನಿರಿ. ಎಂದು ತಿಳಿಸುತ್ತಾ ಬಾಪ್‌ದಾದಾ ತಮ್ಮ ಸ್ವರಾಜ್ಯ ಅಧಿಕಾರಿ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತನು ಮನ ಧನಗಳನ್ನು ಸಫಲ ಮಾಡಿರುವ ಸಫಲತಾ ನಕ್ಷತ್ರ.

2. ಸಮಯ ನನ್ನ ರಚನೆ ನಾನು ಮಾಸ್ಟರ್ ರಚಯಿತನು.

3. ನಾನು ಅಧೀನ ವಿಷಯಗಳಿಂದ ನಿರಾಧಾರವಾಗಿ ಒಂದು ಕ್ಷಣದಲ್ಲಿ ಜೀವನ್ ಮುಕ್ತಿಯನ್ನು ಪಡೆದು ಸಂಪನ್ನವಾಗಿದ್ದೇನೆ.

4. ನಾನು ವಿಷಯಗಳನ್ನು ನೋಡುತ್ತಲೂ ನೋಡದೇ, ಕೇಳುತ್ತಲೂ ಕೇಳದೇ, ಯೋಚಿಸದೇ ಕೇಳಿಸಿಕೊಂಡರೂ ಅಳವಡಿಸಿಕೊಳ್ಳುತ್ತಿದ್ದೇನೆ.

5. ನಾನು ವಿಷಯಗಳನ್ನು ದೊಡ್ಡದಾಗಿ ಮಾಡಿಕೊಳ್ಳುವುದು, ಚಿಕ್ಕದಾಗಿ ಮಾಡಿಕೊಳ್ಳುವುದು ಎಂಬ ಆಟಗಳನ್ನು ಸಮಾಪ್ತಿ ಮಾಡಿ ಎದುರಿಗೆ ಬರುತ್ತಿರುವ ಪ್ರತಿಯೊಂದು ವಿಷಯಗಳನ್ನು ನನ್ನ ಎದುರಿಸುವ ಶಕ್ತಿ ಸಹನೆ ಶಕ್ತಿ ಸಂಕೀರ್ಣ ಶಕ್ತಿ ನಿರ್ಣಯ ಮಾಡುವ ಶಕ್ತಿಯ ಪೇಪರ್ ನಂತೆ ಭಾವಿಸಿ, ತಂದೆಯ ಹತ್ತಿರವಿದ್ದು ಪಾಸ್ ವಿತ್ ಆನರ್ ಆಗಿದ್ದೇನೆ.

6. ನಾನು ಬ್ರಹ್ಮಾ ತಂದೆಯನ್ನು ಅನುಸರಿಸಿ ಸ್ವತಹವಾಗಿ ತಂದೆಯ ಸಮಾನವಾಗಿ, ಅಶರೀರಿಯಾಗಿ, ಬಿಂದುವಾಗಿದ್ದೇನೆ.

7. ನಾನು ಶಾಂತಿಯ ಶಕ್ತಿಯಿಂದ ಶಾಂತಿಯ ಪ್ರಕಾಶದಿಂದ ಕರ್ಮ ಮಾಡುವ ಆತ್ಮಿಕ ಕರ್ಮಯೋಗಿ ಫರಿಶ್ತಾ.

8. ನಾನು ಪ್ರತಿದಿನ ಅಮೃತ ವೇಳೆ ತಂದೆಯಿಂದ ಕರ್ಮಯೋಗಿ ಫರಿಶ್ತಾ ಭವ! ಎಂಬ ವರದಾನವನ್ನು ಪಡೆದು ಕೆಲಸ ಕಾರ್ಯಗಳಲ್ಲಿ ಬರುತ್ತಿದ್ದೇನೆ.

9. ನಾನು ಫರಿಶ್ತಾ ರೂಪದಲ್ಲಿ ಕರ್ಮಯೋಗಿಯಾಗಿ ಡಬಲ್ ಲೈಟ್ ಆಗಿ ಪ್ರಕಾಶಮಯ ಶರೀರದಿಂದ ಹಗುರವಾಗಿ ಕರ್ಮವನ್ನು ಮಾಡುತ್ತಿದ್ದೇನೆ.

10. ಯಾವ ವಿಷಯದ ಅವಶ್ಯಕತೆ ಯಾರಿಗೆ ಇದೆಯೋ ಅವರೊಬ್ಬರೇ ಕೇಳುವ ಹಾಗೆ ಎಷ್ಟು ಅವಸರವೋ ಅಷ್ಟರವರೆಗೆ ನಾನು ಮಾತನಾಡುತ್ತೇನೆ ಆದರೆ ಆ ವಿಷಯದೊಂದಿಗೆ ಸಂಬಂಧವಿಲ್ಲದವರ ಕಿವಿಗಳಲ್ಲಿಯೂ ಬೀಳುವಂತೆ ಮಾತನಾಡುವುದಿಲ್ಲ.

11. ನಾನು ಸೇವೆ ಮಾಡುತ್ತಿದ್ದರೂ ಶ್ರೇಷ್ಠ ಸ್ಥಿತಿಯಿಂದ ಪರಿಶ್ತಾ ಆಗಿ ಬಂದು ಸಂದೇಶ ಕೊಟ್ಟು ಹಿಂತಿರುಗಿ ಮನೆಗೆ ಶ್ರೇಷ್ಠ ಸ್ಮೃತಿಯಲ್ಲಿ ಹೋಗುತ್ತಿದ್ದೇನೆ.

12. ನಾನು ನನ್ನ ಕನಿಷ್ಠ ರೂಪದಿಂದ ಶುದ್ಧವಾದ ಶಾಂತಿಮಯ, ಸುಖಮಯ ತರಂಗಗಳನ್ನು ಪ್ರಸರಿಸುವ ಮೈಟ್(ಶಕ್ತಿ) ಸ್ವರೂಪ.

13. ನಾನು ಸ್ವಯಂ ಮತ್ತು ಸಹಯೋಗದಿಂದ ಇತರರ ಸಂಸ್ಕಾರಗಳನ್ನು ಸಹ ಪರಿವರ್ತನೆ ಮಾಡುವ ಲಕ್ಷ್ಯವಿಟ್ಟುಕೊಂಡಿದ್ದೇನೆ.

14. ನಾನು ನನ್ನ ಶಕ್ತಿಗಳ ವಾಯುಮಂಡಲವನ್ನು ವ್ಯಾಪಿಸುವ ಮಾಸ್ಟರ್ ಸರ್ವ ಶಕ್ತಿವಂತನು.